"ಹಂಗೆಲ್ಲ ಮೋಸ ಮಾಡಿ ದುಡ್ಡು ಕಸಿಯೋ ಹಂಗಿಲ್ಲ. ಕಾನೂನು ನಮ್ಮ ಪರ ಉಂಟು. ಹಿರಿಯರನ್ನ ಕಡೆಗಣಿಸಿದ್ರೆ, ಕೆಟ್ಟದಾಗಿ ನಡೆಸ್ಕೊಂಡ್ರೆ ಜೈಲಿಗೆ ಹಾಕ್ತಾರಂತೆ ಗೊತ್ತುಂಟಾ?" ಹಳ್ಳಿಮೂಲೆಯಲ್ಲಿದ್ದರೂ ತಮಗೆ ಕಾನೂನು ಗೊತ್ತುಂಟು ಎನ್ನುವುದನ್ನು ಸಾಬೀತುಪಡಿಸುವ ಮಾತಾಡಿದರು ವೆಂಕಪ್ಪಯ್ಯ. ಮತ್ತು ಆ ಮಾತಾಡುವಾಗ ದನಿ ಕೊಂಚ ಏರಿದ್ದೂ ಹೌದು. ಮಗ ಪುಸುಕ್ಕನೆ ಒಳಗೆ ಹೋಗಿದ್ದು ನೋಡಿ ಅಂತಾ ಮಾತಾಡಿದ್ದು ಸಾರ್ಥಕವಾಯ್ತು ಅನಿಸಿದ್ದೂ ಹೌದು. 'ಹೂಂ, ಮುಂದುವರಿಸು' ಎನ್ನುವಂತೆ ಗೆಳೆಯನ ಮುಖ ನೋಡಿದರು ವೆಂಕಪ್ಪಯ್ಯ. ಕೆಮ್ಮಿ ಗಂಟಲು ಸರಿ ಮಾಡಿಕೊಂಡು ಮುಂದುವರಿಸಿದರು ಶ್ರೀನಿವಾಸರಾಯರು, "ಗುರುತು ಪರಿಚಯದವರ ಮನೆಗೆ ಹೋಗಿ ಕಷ್ಟ ಸುಖ ಮಾತಾಡಿಕೊಂಡು ಬರೋದು ಮನೆಯವರ ಕಣ್ಣಲ್ಲಿ ದೊಡ್ಡ ಅಪರಾಧ. ಹೋದಲ್ಲೆಲ್ಲಾ ಮನೆಯವರ ಮೇಲೆ ಇಲ್ಲಸಲ್ಲದ ಅಪವಾದ ಹೊರಿಸ್ತೀನಂತೆ. ಅವರಿಗೆಲ್ಲಾ ಮರ್ಯಾದೆ ಹೋಗುತ್ತಂತೆ. ಹೆಂಡತಿ ಏನಂತಾಳೆ ಗೊತ್ತಾ..."



"....."

"ನಾನು ಹೋಗೋದು ಅಂತಲ್ಲಿ ಸಿಗೋ ಕಾಫಿ ತಿಂಡಿಗೆ ಬಾಯಿ ಕಳ್ಕೊಂಡು ಅಂತ ಅವಳ ನಂಬಿಕೆ..."

"ಹೌದು ಅನ್ಬೇಕಿತ್ತು. ಮನೇಲಿ ಹೊಟ್ಟೆ ತುಂಬಾ ಅನ್ನ ಹಾಕಿದ್ರೆ ಬೇರೆಯೋರ ಮನೆಬಾಗಿಲಿಗೆ ಯಾಕೆ ಹೋಗ್ತೀನಿ ಅಂತ ದಬಾವಣೆ ಹಾಕ್ಬೇಕಿತ್ತು."

"ಹಾಕದೆ ಬಿಟ್ಟಿಡ್ತೀನಾ? ಎಲ್ಲಾ ಒಟ್ಟಿಗೆ ಸೇರ್ಕಂಡು ನನ್ನ ಬಾಯಿ ಮುಚ್ಚಿಸ್ತಾರೆ. ಮೂಲೇಲಿ ಕೂರಿಸ್ತಾರೆ."

"ಏನಂದ್ರೂ ನೀನು ಮೆದುಗಸ್ಥ ಮಾರಾಯಾ. ಇನ್ನೊಂಚೂರು ಜೋರಾಗ್ಬೇಕು ನೀನು..." ವೆಂಕಪ್ಪಯ್ಯ ಗೆಳೆಯನಿಗೆ ಹಿತೋಪದೇಶ ಮಾಡಿದರು.

★★★

ಎರಡು ದಿನ ಹಳೆಯ ಗೆಳೆಯರು ಹಳೇ ಪುರಾಣವನ್ನು ಅದೆಷ್ಟು ಮಗುಚಿ ಹಾಕಿದರು ಅಂದರೆ ಮರದ ಬಾಯಾಗಿದ್ದರೆ ಒಡೆದು ಹೋಗುತ್ತಿತ್ತು ಅನ್ನುವಷ್ಟು. ವೆಂಕಪ್ಪಯ್ಯನ ಮಗ ಮೂಗಿನ ಮೇಲೆ ಬೆರಳಿಟ್ಟುಕೊಂಡ. "ಅಪ್ಪನಿಗೆ ಮರೆವು ಶುರುವಾಗಿದೆ ಅಂದ್ಕೊಂಡಿದ್ನಲ್ಲೇ. ಎಲ್ಲಾ ನೆನಪುಂಟು ನೋಡು..." ಅಮ್ಮನ ಮುಂದೆ ಉದ್ಗಾರ ತೆಗೆದ.

"ನಿಂಗೊತ್ತಿಲ್ಲನೋ, ಹಳೇದೆಲ್ಲಾ ನಿನ್ನೆ ಮೊನ್ನೆ ನಡೆದ ಹಾಗೆ ನೆನಪುಂಟು. ಹೊ ಸ ವಿಷಯಾನೇ ಮರೆತು ಹೋಗೋದು..."

"ಏನೋಪ್ಪ, ಈ ಮುದುಕರ ಪಂಚಾತ್ಕೆ ಅರ್ಥಾನೇ ಆಗಲ್ಲ..."

"ನೀವೇನು ಹುಡುಗಣ್ಣ ಅಂದ್ಕಂಡಿದೀರಾ? ಎರಡು ಮೊಮ್ಮಕ್ಕಳ ಅಜ್ಜ ಆಗಿದೀರಿ..." ಛೇಡಿಸಿದಳು ಸೊಸೆ.

ಈ ಎರಡು ದಿನ ಸುಮ್ಮನೆ ಕೂತಿರಲಿಲ್ಲ ವೆಂಕಪ್ಪಯ್ಯನ ಮಗ. ಶ್ರೀನಿವಾಸರಾಯರ ಜೊತೆ ಪಟ್ಟಾಂಗ ಮಾಡುತ್ತಾ ಅವರ ವಿಳಾಸವನ್ನು ಅವರ ಬಾಯಿಂದ ಅವರಿಗೇ ಗೊತ್ತಿಲ್ಲದಂತೆ ಹೊರಡಿಸಿದ್ದ. ಬೆಂಗಳೂರಿನಲ್ಲಿದ್ದ ಗುರುತಿನ ಜನಕ್ಕೆ ಹೇಳಿ ಅವರ ಮನೆಗೆ ಸುದ್ದಿ ತಲುಪಿಸಿದ್ದ. ಇಷ್ಟು ವಯಸ್ಸಾದವರು ಬಸ್ಸು ಹತ್ತಿ ಒಬ್ಬರೇ ಬಂದಿದ್ದಾರೆಂದರೆ ಏನೋ ಎಡವಟ್ಟಾಗಿದೆ ಎಂದು ಅವನ